ಯಾರಿಗೂ ಹತ್ತಕ್ಕಿಂತ ಹೆಚ್ಚು ಚಾಟಿಯೇಟುಗಳನ್ನು ನೀಡಬಾರದು. ಅಲ್ಲಾಹುವಿನ ಕಾನೂನುಗಳ ಉಲ್ಲಂಘನೆಯಲ್ಲಿ ವಿಧಿಸಲಾಗುವ ಶಿಕ್ಷೆಯ ಹೊರತು

ಅಬೂ ಬುರ್ದಾ ಅನ್ಸಾರಿ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ. ಅಲ್ಲಾಹುವಿನ ಸಂದೇಶವಾಹಕರು (ಅವರ ಮೇಲೆ ಅಲ್ಲಾಹುವಿನ ಕೃಪೆ ಮತ್ತು ಶಾಂತಿಯಿರಲಿ) ಹೀಗೆ ಹೇಳುವುದನ್ನು
ಅವರು ಕೇಳಿದ್ದರು: "ಯಾರಿಗೂ ಹತ್ತಕ್ಕಿಂತ ಹೆಚ್ಚು ಚಾಟಿಯೇಟುಗಳನ್ನು ನೀಡಬಾರದು.
ಅಲ್ಲಾಹುವಿನ ಕಾನೂನುಗಳ ಉಲ್ಲಂಘನೆಯಲ್ಲಿ ವಿಧಿಸಲಾಗುವ ಶಿಕ್ಷೆಯ ಹೊರತು."
[صحيح] [متفق عليه]

ಒಬ್ಬನಿಗೆ ಹತ್ತು ಚಾಟಿಯೇಟುಗಳಿಗಿಂತ ಹೆಚ್ಚು ಹೊಡೆಯುವುದನ್ನು ಪ್ರವಾದಿಯವರು (ಅವರ ಮೇಲೆ ಅಲ್ಲಾಹುವಿನ ಕೃಪೆ ಮತ್ತು ಶಾಂತಿಯಿರಲಿ) ನಿಷೇಧಿಸಿದ್ದಾರೆ. ಅದು ಪಾಪಗಳಿಗಾಗಿ ವಿಧಿಸಲಾದ ಶಿಕ್ಷೆಯಲ್ಲದ ಹೊರತು. ಇಲ್ಲಿನ ಉದ್ದೇಶವು ಶರಿಯತ್ನಲ್ಲಿ ವಿಧಿಸಲಾದ ನಿರ್ದಿಷ್ಟ ಸಂಖ್ಯೆಯ ಚಾಟಿಯೇಟು ನೀಡುವುದು, ಹೊಡೆಯುವುದು ಅಥವಾ ನಿರ್ದಿಷ್ಟ ಶಿಕ್ಷೆಯನ್ನು ನಿಷೇಧಿಸುವುದಲ್ಲ. ಬದಲಿಗೆ ಶಿಸ್ತಿಗಾಗಿ ಹೊಡೆಯುವಾಗ ಹತ್ತು ಚಾಟಿಯೇಟಿಗಿಂತ ಹೆಚ್ಚಿಸಬಾರದು. ಉದಾಹರಣೆಗೆ ಹೆಂಡತಿ ಮತ್ತು ಮಕ್ಕಳಿಗೆ ಹೊಡೆಯುವುದು.

http://sunnah.global/hadeeth/kn/show/2987